
ಪೀಪಟಿಗೆ

ವಾರಪತ್ರಿಕೆ, ಸಂಪಾದಕ: ಸಿರಿಮನೆ ನಾಗರಾಜ್

ಖಾಸಗಿ ಪ್ರಸಾರಕ್ಕಾಗಿ ೪-೭-೮೨ ಭಾನುವಾರ ೨೨

ಕ್ಯುಬೋಟಾ

KUBOTA World's No. 1 Power Tiller
A KAMCO PRODUCT



ಪ್ರಪಂಚದ ಅತ್ಯುತ್ತಮ ಪವರ್ ಟಿಲ್ಲರ್
ಹಂಚಿಕೆದಾರರು:
ಎಂ. ಎಸ್. ವೆಂಕಟ ವರದ ಶೆಟ್ಟಿ ಅಂಡ್ ಸನ್ಸ್,
ಜಯಪುರ, ಚಿಕ್ಕಮಗಳೂರು ಜಿಲ್ಲೆ ಫೋನ್: 32

ನಾಲ್ಕನೇ ಬಾರಿ

ಅಮ್ಮಡಿ ಎಸ್ಟೇಟ್ ಸರ್ವೆಗೆ ಜಿಲ್ಲಾಧಿಕಾರಿ ಆದೇಶ

ಕೊಪ್ಪ: ಇಲ್ಲಿನ ಅಮ್ಮಡಿ ಎಸ್ಟೇಟ್‌ನಲ್ಲಿ ಸರ್ಕಾರಿ ಜಾಗ ಒತ್ತುವರಿ ಆಗಿದೆಯೆ ಇಲ್ಲವೆ, ಅಕ್ರಮವಾಗಿ ಕಾಡು ಕಡಿದಿದ್ದಾರೆಯೆ ಇಲ್ಲವೆ-ಮುಂತಾದ ಚರ್ಚೆ, ಆರೋಪ ಪ್ರತ್ಯಾರೋಪಗಳ ನಡುವೆ, ಇಡೀ ಎಸ್ಟೇಟನ್ನು (ಅವರು ಬೇಲಿ ಹಾಕಿರುವ ವಿಸ್ತೀರ್ಣವನ್ನು) ಅರಣ್ಯ ಇಲಾಖೆಯೊಂದಿಗೆ ಜಂಟಿಯಾಗಿ ಪುನಃ ಅಳತೆ ಮಾಡುವಂತೆ ಜಿಲ್ಲಾಧಿಕಾರಿಗಳು ಭೂ ದಾಖಲೆಗಳ ಉಪ ನಿರ್ದೇಶಕರಿಗೆ ಆದೇಶವಿತ್ತಿದ್ದಾರೆಂದು ತಿಳಿದು ಬಂದಿದೆ.

ಈ ಸರ್ವೆ ನಡೆದರೆ ಅದು ನಾಲ್ಕನೆಯದಾಗಿರುತ್ತದೆ ಎನ್ನಲಾಗಿದೆ.

ಜನವರಿ ೬-೭ ರಂದು, ಅರಣ್ಯ ಇಲಾಖೆ ಮರ ಕಡಿಯಲು ಅನುಮತಿ ಕೊಡುವ ಮೊದಲು ನಡೆಸಿದ ಜಂಟಿ ಅಳತೆಯಿಂದ ೩೦ ಎಕರೆ ೩೫ ಗುಂಟೆ ಜಾಗ ಒತ್ತುವರಿ ಆಗಿರುವುದು ಪತ್ತೆಯಾಗಿದ್ದು ಅದನ್ನು ಜೇರ್ಪಡಿಸುವಂತೆ ಇಲಾಖೆಯವರು ಕಾಲುವೆ ಮಾಡಿಸಿದ್ದಾರೆಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಇದಕ್ಕೆ ಮೊದಲು ಸರ್ವೆ ನಡೆಸಿದ ಅಧಿಕಾರಿಗಳು ಎರಡೂ ಚಿಲ್ಲರೆ ಎಕರೆ ಒತ್ತುವರಿ ಆಗಿರುವುದಾಗಿ ವರದಿ ಮಾಡಿದ್ದರೆನ್ನಲಾಗಿದೆ.

ಬಾಜುದಾರರಿಗೆ ಸೂಚನೆ ಕಳಿಸಿ, ಅವರ ಸಮಕ್ಷಮ ಸರ್ವೆ ನಡೆಸಬೇಕೆಂದು ಸುತ್ತಮುತ್ತಲ ಹಳ್ಳಿಗಳ ಬಾಜುದಾರರು ಒತ್ತಾಯಿಸುತ್ತಿದ್ದು, ಈ ಸರ್ವೆಯು ಸಮಯಕ್ಕಾದರೂ ಅದು ಜಾರಿಯಾದೀತೆಂದು ನಿರೀಕ್ಷಿಸಲಾಗಿದೆಯೆಂದು ತಿಳಿದುಬಂದಿದೆ.

ಕಡಿದ ಮರದ ಬಗ್ಗೆ ಎಣಿಕೆ

ಈ ನಡುವೆ ಇಲಾಖೆ ಪರವಾನಗಿ (ಪುಟ ೪ ಕ್ಕೆ)

(ಪುಟ ೪ ಕ್ಕೆ)

ಕನ್ನಡ ಜಾಗೃತಿ ದಿನಾಚರಣೆ

ಕೊಪ್ಪ: ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಕರೆಯ ಮೇರೆಗೆ ಜೂನ್ ೨೭ ರಂದು ಇಲ್ಲಿನ 'ಅಂಕುರ ಬಳಗ'ದ ಆಶ್ರಯದಲ್ಲಿ ಕನ್ನಡ ಜಾಗೃತಿ ದಿನಾಚರಣೆ ಆಚರಿಸಲಾಯಿತು.

ಪುರಭವನದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿ. ವಿ. ನವಿಲೇಕರ್ ವಹಿಸಿದ್ದರು.

ಕನ್ನಡ ಜಾಗೃತಿ ದಿನಾಚರಣೆಯ ಅಗತ್ಯದ ಬಗ್ಗೆ ಮಾತನಾಡಿದ ಜಿ. ಎಸ್. ಶಿವನಂಜಯ್ಯ, ವ್ಯಕ್ತಿ, ಸಮಾಜ ಮತ್ತು ಸಂಸ್ಕೃತಿಗೂ ಭಾಷೆಗೂ ಇರುವ ಸಂಬಂಧವನ್ನು ಗುರುತಿಸುತ್ತ ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಅಗ್ರಪಟ್ಟ ಕಟ್ಟುವುದರ ಸಮರ್ಥಕತೆಯನ್ನು ವಿವರಿಸಿದರು.

ಕನ್ನಡ ನಾಡಿನ ಹೆಸರು ಕರ್ನಾಟಕವೆಂದಾಯಿತು; ಪ್ರಾಥಮಿಕ ಶಿಕ್ಷಣದಲ್ಲಿ ನುಡಿಗೆ ಆದ್ಯತೆ ಸಿಕ್ಕಿ ಆಯಿತು; ಇನ್ನು ಜನ ಜೀವನದಲ್ಲಿ ಜನಸಾಮಾನ್ಯರ ಭಾಷೆಯಾದ ಕನ್ನಡದಲ್ಲಿ ಅಧಿಕಾರಸ್ಥರು ಮತ್ತಿತರರು ಜನಸಾಮಾನ್ಯರ ಜೊತೆ ವ್ಯವಹರಿಸುವಂಥ ಎಚ್ಚರ ಬೆಳೆಯಬೇಕಾಗಿದೆ ಎಂದರು. (೪ ನೇ ಪುಟಕ್ಕೆ)

(೪ ನೇ ಪುಟಕ್ಕೆ)

ಕನ್ನಡ ವಿಜಯೋತ್ಸವ ದಿನ ರಾಜ್ ಅಭಿಮಾನಿಗಳಿಂದ ಶಾಲಾ ಮಕ್ಕಳಿಗೆ ಸಿಹಿ

ಕೊಪ್ಪ: ಇಲ್ಲಿನ ಡಾ॥ ರಾಜ್‌ಕುಮಾರ್ ಅಭಿಮಾನಿಗಳ ಸಂಘದವರು ಜುಲೈ ೧ ರಂದು ಕನ್ನಡ ವಿಜಯೋತ್ಸವ ದಿನಾಚರಣೆಯ ಅಂಗವಾಗಿ ಇಲ್ಲಿನ ಎಲ್ಲಾ ಶಾಲೆಗಳ ಮಕ್ಕಳಿಗೆ ಸಿಹಿ ಹಂಚಿದರು.

ಗುಳಮಾವಿನ ತೊಪ್ಪೆ ಕೆತ್ತುವ ಒಬ್ಬ ಮರದಿಂದ ಬಿದ್ದು ಸತ್ತದ್ದು ನಿಜ

ಶೃಂಗೇರಿ: ನೆಮ್ಮಾರಿನ ಬಳಿ ಗುಳಮಾವಿನ ತೊಪ್ಪೆ ಕೆತ್ತುವುದರಲ್ಲಿ ನಿರತನಾಗಿದ್ದ ಜೋಸೆಫ್ ಎಂಬಾತ ಫೆ. ೯ ರಂದು ಬಿದ್ದು ಸತ್ತದ್ದು ನಿಜ. ಅಂದೇ ಮರಣೋತ್ತರ ಪರೀಕ್ಷೆಯೊಂದಿಗೆ ಮಹಜರು ನಡೆಸಿದ ಶೃಂಗೇರಿ ಪೋಲೀಸರು ಶವವನ್ನು ಅವನ ಜೊತೆಯಲ್ಲೇ ದುಡಿಯುತ್ತಿದ್ದ ಅವನ ಬಂಧುಗಳಿಗೆ ಒಪ್ಪಿಸಿದರು. ಅವತ್ತೆ ಕಾರಿನಲ್ಲಿ ಕೇರಳದ ಅವನ ಊರಿಗೆ ಸಾಗಿಸಲಾಯಿತು.

[ನಮ್ಮ ಮೊದಲ ವರದಿಯಲ್ಲಿ (೩೦-೫-೮೨) ಮರದಿಂದ ಬಿದ್ದು ಸತ್ತನೆಂಬ ಮಾತಿಗೆ ಪುರಾವೆ ಸಿಕ್ಕಿಲ್ಲ ಎಂದು ಪ್ರಕಟವಾಗಿತ್ತು.]

ಶೃಂಗೇರಿ ಕಾಲೇಜಿನ ಅಂತಿಮ ಪರೀಕ್ಷೆಗಳ ಫಲಿತಾಂಶ

ಶೃಂಗೇರಿ: ಜೆ. ಸಿ. ಬಿ. ಎಂ. ಕಾಲೇಜಿನ ಅಂತಿಮ ಪದವಿ ಪರೀಕ್ಷೆಗಳ ಫಲಿತಾಂಶದ ಶೇಕಡಾವಾರು ಈ ರೀತಿ ಇವೆ: ಬಿ. ಎ.: ೩೧. ೮ (ಹೊರ ಅಭ್ಯರ್ಥಿಗಳೂ ಸೇರಿ); ಬಿ. ಎಸ್ಸಿ: ೮೯.೫; ಬಿ. ಕಾಂ.: ೩೪.

ಸರಳ ಸಮಾರಂಭದಲ್ಲಿ ಕೊಪ್ಪದ

ಪ್ರಥಮ ದರ್ಜೆ ಕಾಲೇಜು ಉದ್ಘಾಟನೆ

ಆತ್ಮೀಯ ಸಮಾರಂಭದಲ್ಲಿ ಪ್ರಥಮ ದರ್ಜೆ ಕಾಲೇಜು ಉದ್ಘಾಟಿಸಲ್ಪಟ್ಟಿತು,

ಕಾಲೇಜು ಸಮಿತಿ ಅಧ್ಯಕ್ಷ ಎಂ. ಡಿ. ಬಾಲಕೃಷ್ಣ ದೀಪ ಬೆಳಗಿಸಿ ಹಾಗೂ ವಿದ್ಯಾರ್ಥಿಗಳಿಗೆ ಅರ್ಜಿ ನೀಡಿ ಉದ್ಘಾಟನೆ ನೆರವೇರಿಸಿದರು.

ಬಿ. ಜಿ. ಚಿದಂಬರ್ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಮಾತನಾಡಿದ ಬಾಲಕೃಷ್ಣ, ಪಿ. ಜಿ. ಗುರ್ಜರ್, ಮೊಹಮದ್ ಸಾದಿಕ್ ಮತ್ತು ಚಿದಂಬರ್ ಅವರುಗಳು, ಕಾಲೇಜು ಸ್ಥಾಪನೆಯ ಹಿಂದೆ ನಡೆದ ಪ್ರಯತ್ನ, ಮಂತ್ರಿಗಳ ಮತ್ತು ಅಧಿಕಾರಿಗಳ ಸಹಾಯ, ಜನರ ಸಹಕಾರ ಇವನ್ನು ಪ್ರಸ್ತಾಪಿಸಿ, ಕಾಲೇಜಿನ ಸದುಪಯೋಗ ಪಡೆದುಕೊಳ್ಳುವಂತೆ ಹಾಗೂ ಅದರ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುವಂತೆ ತಾಲೂಕಿನ ಜನತೆ ಮತ್ತು ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ಕೊಪ್ಪ: ಬಾಳಗಡಿಯ ಕಾಲೇಜು ಆವರಣದಲ್ಲಿ ಜುಲೈ ೩ ರ ಬೆಳಿಗ್ಗೆ ನಡೆದ ಸರಳ,

(೪ನೇ ಪುಟಕ್ಕೆ)

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ:
ಸಿರಿಮನೆ ನಾಗರಾಜ್
ಅಚ್ಚು: ನೇಸರ ಮುದ್ರಣ, ಕೊಪ್ಪ

ಪ್ರಥಮ ದರ್ಜೆ ಕಾಲೇಜು ಸಮಿತಿ, ಕೊಪ್ಪ.

ಪ್ರಕಟಣೆ

ಘನ ಸರ್ಕಾರದಿಂದ ಕೊಪ್ಪಕ್ಕೆ ಪ್ರಥಮ ದರ್ಜೆ ಕಾಲೇಜು ಮಂಜೂರಾಗಿದೆ. ಕಾಲೇಜು 1982 ರ ಜುಲೈ 3 ರಂದು ಕಾರ್ಯಾರಂಭ ಮಾಡಿದೆ. ಕಾಲೇಜಿಗೆ ಪ್ರವೇಶ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು **ಬಾಳಗಡಿ**ಯಲ್ಲಿರುವ ಕಾಲೇಜಿನ ಕಛೇರಿಯಲ್ಲಿ 1 ರೂ. ಶುಲ್ಕ ಸಲ್ಲಿಸಿ ಅರ್ಜಿ ಫಾರಂಗಳನ್ನು ಪಡೆಯಬಹುದು.

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:	15-7-82
ಪ್ರವೇಶಕ್ಕೆ ಕೊನೇ ದಿನಾಂಕ:	25-7-82

ಕಾಲೇಜಿನಲ್ಲಿ ಈ ಕೆಳಕಂಡ ವಿಷಯಗಳಲ್ಲಿ ಬಿ. ಎ. ಮತ್ತು ಬಿ. ಕಾಂ. ತರಗತಿಗಳು 1982–83 ರ ಶೈಕ್ಷಣಿಕ ವರ್ಷದಿಂದ ಪ್ರಾರಂಭವಾಗುತ್ತವೆ.

ವಿಷಯಗಳು:–

1 ಬಿ. ಎ. (i) ಚರಿತ್ರೆ, ಅರ್ಥಶಾಸ್ತ್ರ, ರಾಜನೀತಿ ಶಾಸ್ತ್ರ
(ii) ಅರ್ಥಶಾಸ್ತ್ರ, ರಾಜನೀತಿ ಶಾಸ್ತ್ರ, ಸಮಾಜ ಶಾಸ್ತ್ರ

2 ಬಿ. ಕಾಂ.

ಹೆಚ್ಚಿನ ವಿವರಗಳನ್ನು ಕಾಲೇಜಿನ ಕಛೇರಿಯಲ್ಲಿ ಪಡೆಯಬಹುದು.

ಪ್ರವೇಶ ಶುಲ್ಕದ ವಿವರ

ಪರಿಶಿಷ್ಟ ಜಾತಿ/ ವರ್ಗ (ಎಸ್. ಸಿ/ಎಸ್. ಟಿ)	12-00
ಆದಾಯ ಸರ್ಟಿಫಿಕೇಟ್ ಹೊಂದಿರುವವರು	37-00
ಇತರರು	51.00

ಸೂಚನೆ: ಮೇಲ್ಕಂಡ ಶುಲ್ಕಗಳಲ್ಲದೆ, ಬೇರೆ ವಿಶ್ವವಿದ್ಯಾಲಯಗಳಿಂದ ಬರುವವರು ಅರ್ಹತಾ ಶುಲ್ಕ 10 ರೂ. ಹಾಗೂ ಬೇರೆ ಕಾಲೇಜಿನಿಂದ ಪ್ರವೇಶ ವರ್ಗಾವಣೆ ಪಡೆವವರು 25-00 ರೂ. ಶುಲ್ಕವನ್ನು ಹೆಚ್ಚುವರಿಯಾಗಿ ಕಟ್ಟಬೇಕು.

ಎಂ. ಡಿ. ಬಾಲಕೃಷ್ಣ, ಅಧ್ಯಕ್ಷರು,
ಮತ್ತು ಸದಸ್ಯರು,
ಪ್ರಥಮ ದರ್ಜೆ ಕಾಲೇಜು ಸಮಿತಿ, ಕೊಪ್ಪ.

ಕನ್ನಡದ ಬೆಲೆ ಹೆಚ್ಚಿತು

ಒಂದಿನ ನಾನೊಂದು ದಿನಸಿ ಅಂಗಡೀಲಿ ಹರಟ್ತಾ ಕೂತಿದ್ದೆ. ಆಗ ಅಲ್ಲಿಗೊಬ್ರು ಬಂದು ಅಂಗಡಿಯವರ ಹತ್ರ "ಒಂದ ಷ್ಟ ಪಟೀ ಪೇಪರ್ ಕೊಡೂದವೆ, ಹ್ಯಾಂಗ್ ತಕ್ತೀರಿ ?" ಅಂದ್ರು. ಅಂಗಡಿಯವರು "ಇಂಗ್ಲಿಷಾದ್ರೆ ಎರಡೂವರೆ, ಕನ್ನಡಕ್ಕಾದ್ರೆ ಎರಡೂಕಾಲು ರೂಪಾಯಿ" ಅಂದ್ರು. ಅಲ್ಲೇ ಕೂತಿದ್ದ ನಂಗೆ ಕನ್ನಡದ ಬಗೆಗಿನ ಈ ತಾರತಮ್ಯ ಕಂಡು ಚುಚ್ಚಿತು. ಅಂಗಡಿಯವರ ಹತ್ರ "ಏನ್ರೀ, ರಾಜ್ಯದಲ್ಲೆಲ್ಲಾ ಕನ್ನಡದ ಸ್ಥಾನಮಾನಕ್ಕಾಗಿ ಚಳುವಳಿ ನಡೀತಿರೋ ಹೊತ್ತಿಗೆ ನೀವು ಕನ್ನಡದ ಬೆಲೆ ಕಮ್ಮಿ ಮಾಡಿದ್ದೀರಿ; ನಿಮಗೆಷ್ಟು ಧೈರ್ಯ? " ಎಂದೆ.

ಅವರು ಸ್ವಲ್ಪ ಯೋಚಿಸಿ "ಸರಿ, ಕನ್ನಡಕ್ಕೇ ಜಾಸ್ತಿ ಬೆಲೆ ಕೊಡೋಣ" ಅಂದ್ರು ನನಗೂ ಮತ್ತು ಪೇಪರ್ ಕೊಡೋಕೆ ಬಂದವರಿಗೂ ಖುಷಿಯಾಯ್ತು. ಅಂಗಡಿಯವರು ಮುಂದುವರಿಸಿ, ಕನ್ನಡಕ್ಕೆ ಎರಡೂ ಕಾಲು ಎಂದೂ, ಇಂಗ್ಲೀಷಿಗೆ ಎರಡು ರೂ ಎಂದೂ ಹೇಳಿದರು. ನಾನು, ಅಂತೂ ಇಂಗ್ಲಿಷಿಗಿಂತ ಕನ್ನಡದ ಬೆಲೆ ಹೆಚ್ಚಾದುದಕ್ಕೆ ಸಮಾಧಾನಪಡುತ್ತ ಅಂಗಡಿಯಿಂದ ಹೊರ ಹೊರಟೆ.

-ನಾಗೇಶ

ಸಂಜಯಗಾಂಧಿ ಹೆಸರಿನಲ್ಲಿ

ಗಿಡ ನೆಡುವವರನ್ನು ಕುರಿತು....

ಮೊನ್ನೆ ಜೂನ್ ೨೩ ರಂದು ದಿ॥ಸಂಜಯ ಗಾಂಧಿಯವರ ಎರಡನೇ ಪುಣ್ಯತಿಥಿಯ ಅಂಗವಾಗಿ ಯುವ ಕಾಂಗ್ರೆಸನವರು ಕೊಪ್ಪದಲ್ಲಿ ಸಭೆ ನಡೆಸಿ, ತೀರ್ಥಹಳ್ಳಿ ರಸ್ತೆಯಲ್ಲಿ ಗಿಡ ನೆಟ್ಟರೆಂಬ ವರದಿ ಓದಿದೆ. ಈ ಕುರಿತು ಯುವ ಕಾಂಗ್ರೆಸನವರ ಮುಂದೆ ಕೆಲವು ಪ್ರಶ್ನೆಗಳನ್ನಿಡುತ್ತಿದ್ದೇನೆ.

ನನಗೆ ತಿಳಿದ ಮಟ್ಟಿಗೆ ಸಂಜಯಗಾಂಧಿಯವರ ಐದಂಶದ ಕಾರ್ಯಕ್ರಮದಲ್ಲಿ ಈ ಗಿಡ ನೆಡುವುದು, ವರದಕ್ಷಿಣೆ ನಿಷೇಧ ಮುಂತಾದುವೆಲ್ಲ ಅಡಕವಾಗಿವೆ. ಆದರೆ ಅವರು ಗಿಡ ನೆಡಲು ಹೇಳಿದ್ದರ ಅರ್ಥವೇನು? ಹೀಗೆ ಪೇಟೆಯ ಒಂದು ರಸ್ತೆಯಲ್ಲಿ ಹತ್ತಿಪ್ಪತ್ತೋ ನೂರೋ ಗಿಡಗಳನ್ನು ನೆಟ್ಟು, ಅತ್ಲಾಗೆ ಬಿಟ್ಟು ಬಿಟ್ಟರೆ ಆಗಿಹೋಯಿತೆ? ಸಂಜಯರ ಉತ್ತರ ಇದೇನಾ?

ಸಂಜಯರು "ಗಿಡ ನೆಡಿ" ಎಂದರಾ ಅಥವಾ ಅರಣ್ಯ ರಕ್ಷಿಸಲು, ಬೆಳೆಸಲು ಕರೆ ಕೊಟ್ಟರಾ ಎಂಬುದು ನನಗೆ ಸರಿಯಾಗಿ ತಿಳಿದಿಲ್ಲ. ಆದರೆ ಇಷ್ಟಂತೂ ನಮ್ಮ ದೇಶದಲ್ಲಿ ಕಾಡಿನ ಅಗತ್ಯದ ಬಗ್ಗೆ ಯೋಚಿಸುವ ಯಾವನೂ ಕೂಡ, ಈಗ ಆಗುತ್ತಿರುವ ಅರಣ್ಯ ನಾಶವನ್ನು ಮೊದಲು ತಡೆಗಟ್ಟಲು ಹೇಳದೆ, ಬರೀ ಗಿಡ ನೆಡಿ ಎನ್ನಲಾರ. ಈ ದೃಷ್ಟಿಯಿಂದ, ದೇಶದಲ್ಲಿ ನಡೆಯುತ್ತಿರುವ ಕಾಡಿನ ನಾಶವನ್ನು ತಡೆಗಟ್ಟಿ, ಈಗಾಗಲೇ ನಾಶವಾಗಿರುವುದನ್ನು ಭರ್ತಿ ಮಾಡಲು ಹೊಸದಾಗಿ ಕಾಡು ಬೆಳೆಸುವುದು ಸಂಜಯರ ನಿಜವಾದ ಅಪೇಕ್ಷೆಯಾಗಿದ್ದಿರಬೇಕೆಂದು ನನಗೆ ಅನ್ನಿಸುತ್ತದೆ.

ಹೀಗೆ ನೋಡಿದಾಗ—ಸಂಜಯರ ಹೆಸರು ಹೇಳಿ ಪ್ರತಿಜ್ಞೆ ಮಾಡುವ, ಅವರ ಕಾರ್ಯಕ್ರಮಗಳನ್ನು ನೆರವೇರಿಸುತ್ತೇವೆನ್ನುವ ನಿಮ್ಮ ಎಷ್ಟು ಜನ ಅವರ ಈ ನಿಜವಾದ ಅಪೇಕ್ಷೆಯಂತೆ ನಡೆಯುತ್ತಿದ್ದೀರಿ? ಒಬ್ಬರೂ ಇಲ್ಲ ಅಲ್ಲವೇ? ನೀವು ಮನಸ್ಸು ಮಾಡಿದರೆ ಈ ಪ್ರಾಂತ್ಯದಲ್ಲಿರುವ ಈ ಅಸಾಧಾರಣ ಅರಣ್ಯ ಸಂಪತ್ತು ಒಂಚೂರೂ ನಾಶವಾಗದಂತೆ ತಡೆಗಟ್ಟಲು ಸಾಧ್ಯ. ಹೌದಲ್ಲವೆ? ಅದರ ಬದಲು ನೀವೇ ಎಷ್ಟೋ ಜನ ಕಾಡಿನ ಕಂಟ್ರಾಕ್ಟರುಗಳಾಗಿಯೋ, ಎಸ್ಟೇಟ್ ಮಾಡುವವರುಗಳಾಗಿಯೋ, ಸ್ವತಃ ಕಾಡಿನ ನಾಶದಲ್ಲಿ ತೊಡಗಿದ್ದೀರಿ, ಅಲ್ಲವೇ? ಅಥವಾ ನಿಮ್ಮ ಪಕ್ಷದಲ್ಲೇ ಇರುವ ಇಂಥ ಎಷ್ಟೋ ಮಂದಿಯ ಹಿತರಕ್ಷಣೆ ಮಾಡುವವರಾಗಿ, ಅವರಿಂದ ವಂತಿಗೆ ಸಂಗ್ರಹಿಸುವವರಾಗಿ ಕೂಡ, ಪರೋಕ್ಷವಾಗಿಯೂ ನೀವು ಕಾಡಿನ ನಾಶಕ್ಕೆ ಸಹಕರಿಸುತ್ತಿರಬಹುದು.

'ಸೀಮಾ'
ಕೊಪ್ಪ.

(೩ ನೇ ಪುಟಕ್ಕೆ)

ಜೈ ಪ. ಘ. ಅ. ದ್ಧಿ ! ['ಕಾಲಕ್ಷೇಪ']

ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ ಎನ್ನುವ ಹೆಸರಿನಲ್ಲಿ ನಮ್ಮ ಘನ ಸರ್ಕಾರದೋರು ಹತ್ತಾರು ವರ್ಷಗಳಿಂದ ಯೋಜನೆಗಳ ರಾಶಿಹಾಕಿ ಘಟ್ಟದಷ್ಟೇ ಎತ್ತರ ಬೆಳೆಸಿದರಂತೆ. ಅಂತೂ ಇಂತೂ ಕುಂತೀ ಮಕ್ಕಳಿಗೆ ವನವಾಸ ಅನ್ನೋ ಗಾದೆಯಂತೆ ಯೋಜನೆಗಳ ಪಟ್ಟಿ, ಲೆಖ್ಖ-ಪತ್ರಗಳ ಕಂತೆ, ಸರ್ಕಾರಿ ಅಧಿಪತಿಗಳ ಕಿಸೆ ಭರ್ತಿ. ಕಂಟ್ರಾಕ್ಟರದು ಇದೇ ಮರ್ಜಿ. ಮಲೆ ಮಕ್ಕಳ ಪಾಡು ಅಂದ್ರೆ ರಾಗಿ ಬೀಸೋ ಹಾಡು. ಆಹಾರ ಬೆಳೆಗಳ ತರಬೇತಿ, ಗಿಡಗಳ ಹಂಚಿಕೆ, ಹತಿಯಾರುಗಳ ಹಂಚಿಕೆ, ಸಬ್ಸಿಡಿ ದರದಲ್ಲಿ ರಾಸಾಯನಿಕ, ಇತ್ಯಾದಿ ಇತ್ಯಾದಿಗಳಿಗಾಗಿ ತೆಗೆದಿಟ್ಟ ೭೮,೩೭೦ ರೂಪಾಯಿಗಳಲ್ಲಿ ಮುಕ್ಕಾಲು ಮೂರು ವೀಸೆಪಾಲು ಖರ್ಚಾಗಿದೆ ಅಂತ ನಮ್ಮ ಜಿಲ್ಲೆಯ ಮಲೆನಾಡು ತಾಲ್ಲೂಕುಗಳ ವರದಿ ವದಂತಿಯಾಗ್ತಾ ಇದೆ. ಇದರಲ್ಲಿ ಕೊಪ್ಪವೂ ಸೇರ್ಪಡೆ ಅಲ್ಲ. ಕುಡಿಯುವ ನೀರು, ಕೆರೆ ದುರಸ್ತಿ, ಸಂಪರ್ಕಸೇತುವೆ, ಕಾಲುದಾರಿ, ವಿದ್ಯುದ್ದೀಪ, ವಸತಿ, ಆರೋಗ್ಯ ರಕ್ಷಣೆ, ಶಿಕ್ಷಣ ಸೌಲಭ್ಯ, ಎಲ್ಲವುಗಳಿಗೂ ಯೋಜನೆಗಳು ಇದ್ದೇ ಇವೆ.

ಆದರೂ ಘಟ್ಟ-ಘಟ್ಟವಾಗಿಯೇ ಇದೆ. ಪ್ರಗತಿ— ಪೇಪರಿನಲ್ಲಿ ಆಗಿದೆ. ಅಭಿವೃದ್ಧಿ? ಮಂತ್ರಿಗಳದ್ದೇ?

ಜೈ ಗ್ರಾಮಾಭಿವೃದ್ಧಿ!

-ವಕ್ರತುಂಡ

ವರದಕ್ಷಿಣೆಯ ಬಗ್ಗೆ ಒಂದು ಅನಿಸಿಕೆ

ವರದಕ್ಷಿಣೆ ವರದಕ್ಷಿಣೆ ವರದಕ್ಷಿಣೆ ಎಂಬ ಭೂತ ಈಗ ಎಲ್ಲೆಲ್ಲಿಯೂ ಎದ್ದು ಕುಣಿಯಲು ಪ್ರಾರಂಭಿಸಿದೆ.

ಅದರ ಕುಣಿತಕ್ಕೆ ತಕ್ಕಂತೆ ಯುವಕರು ತಾಳ ಹಾಕುತ್ತಿದ್ದಾರೆ. ಬಡ ಕನ್ಯಾಪಿತೃಗಳು ಆ ಭೂತವನ್ನು ಸಂತೃಪ್ತಿ ಪಡಿಸಲಾರದೆ ನರಳುತ್ತಿದ್ದಾರೆ.

ಮದುವೆ ಎಂಬ ಪರದೆ ಹಿಂದೆ ಗಾಢಾಂಧಕಾರದ ರೂಪ ತಾಳಿ ಎದ್ದು ನಿಲ್ಲುವ ವರದಕ್ಷಿಣೆಯ ಸಮಸ್ಯೆ ಬಡವರ ಶಾಂತಿಯನ್ನು ಕಸಿಯುತ್ತಿದೆ.

'ಮದುವೆ' ಎಂಬ ಮೂರಕ್ಷರದ ಗಂಡು ಹೆಣ್ಣನ್ನು ಬಾಳೆಂಬ ದೋಣಿಗೆ ಏರಿಸುವ ಶುಭ ಮಿಲನ ಈಗೀಗ ಗಂಡನ್ನು ಕೊಳ್ಳುವ ಸಂತೆಯಾಗುತ್ತಿದೆ.

ವರದಕ್ಷಿಣೆಯನ್ನು ಕೇಳುವುದು-ಕೊಡುವುದು ಕಾನೂನು ವಿರೋಧ. ಆದರೂ ಈಗ ದೇಶಾದ್ಯಂತ ಚಾಲ್ತಿಯಾಗಿದೆ.

ಸಂಘಗಳಿಂದ ಗಂಡು-ಹೆಣ್ಣಿನ ಮಾತಾಪಿತೃಗಳಿಂದ ಈ ಪೀಡೆಯನ್ನು ತೊಡೆಯಲು ಸಾಧ್ಯವಿದೆ. ಆದರೆ ಆ ಬಗ್ಗೆ ಜನರು ಹೆಚ್ಚು ಗಮನ ಹರಿಸದೇ ಇರುವುದು ಕನ್ಯೆಯ ದುರದೃಷ್ಟ.

ವರ ಕನ್ಯೆಯನ್ನು ನೋಡಲು ಬಂದಾಗ ತನ್ನಾಸೆಯ ಬಯಕೆಯ ಪಟ್ಟಿಯನ್ನು ಕನ್ಯಾಪಿತೃವಿನೆದುರು ಇಡುತ್ತಾನೆ. ಕನ್ಯಾಭಾರವನ್ನು ಹೊತ್ತುಕೊಂಡಿರಲಾರದೆ ತಂದೆ ತನ್ನಾಸ್ತಿಯನ್ನು ಮಾರಿಯಾದರೂ ಮಗಳಿಗೆ ಮದುವೆ ಮಾಡುತ್ತಾನೆ.

ತನ್ನವರನ್ನೆಲ್ಲ ಸಾಲಸಾಗರದಲ್ಲಿ ಮುಳುಗಿಸಿ ಪತಿಗೃಹವನ್ನು ಸೇರಿದ ಹೆಣ್ಣು ಮನಃಶಾಂತಿಯನ್ನು ಕಳೆದುಕೊಂಡು ಕೊರಗುವಂತಾಗುತ್ತದೆ.

ತಂದೆ-ತಾಯಿಯರ ಬಡತನ, ನಿಟ್ಟುಸಿರು ಚಿಂತೆಯ ಬೆಂಕಿಯಾಗಿ ಅವಳ ಹೃದಯವನ್ನು ಸುಡುತ್ತದೆ. ಇದರಿಂದಾಗಿ ಅವಳಿಗೆ ಪತಿಯೊಂದಿಗೆ ಸುಖಸಂಸಾರವನ್ನು ನಡೆಸಲೂ ಸಾಧ್ಯವಾಗುವುದಿಲ್ಲ.

'ದುಡ್ಡನ್ನು ಕೊಟ್ಟು ದುಃಖವನ್ನು ಪಡೆ' ಎಂಬಂತೆ ಬಡಕನ್ಯಾಪಿತೃಗಳು ಮಗಳ ಸಂತೃಪ್ತಿಯ ಜೀವನವನ್ನು ಕಾಣದೆ ಬಳಲುತ್ತಾರೆ.

ಈ ವರದಕ್ಷಿಣೆಯ ಭೂತವನ್ನು ನಮ್ಮ ಸಮಾಜದಿಂದ ಹೊರತಳ್ಳಲು ಸಾಧ್ಯವಿಲ್ಲವೇ? ಈ ಪ್ರಶ್ನೆಗೆ ಉತ್ತರವನ್ನು ಹುಡುಕಿಕೊಳ್ಳಬೇಕು.

ಕನ್ಯೆಯ—ಕನ್ಯಾಪಿತೃಗಳ ಮನಸುಡುವ ಈ ವರದಕ್ಷಿಣೆಯನ್ನು ಪ್ರೇಮ ವಿವಾಹಗಳಿಂದ ತೊಡೆಯಲು ಸಾಧ್ಯವಿದೆ.

ಹೆಚ್ಚು ಹಣವನ್ನು ಖರ್ಚುಮಾಡಿ ಮದುವೆಯನ್ನು ಅದ್ದೂರಿಯಾಗಿ ನಡೆಸುವುದು ವ್ಯರ್ಥ. ಕನ್ಯೆ ಮತ್ತು ಕನ್ಯಾಪಿತೃಗಳು ವರದಕ್ಷಿಣೆಯನ್ನು ಪ್ರತಿಭಟಿಸಬೇಕು.

ವರ ತನ್ನನ್ನು ತಾನು ಮಾರಿಕೊಳ್ಳುವುದಿಲ್ಲವೆಂದು ನಿರ್ಧರಿಸಬೇಕು. ಬಹುಮಟ್ಟಿಗೆ ರಿಜಿಸ್ಟರ್ ಮದುವೆಗಳು ಹೆಚ್ಚು ಹೆಚ್ಚು ನಡೆಯಲು ಪ್ರಾರಂಭಿಸಿದರೆ ಈ ವರದಕ್ಷಿಣೆಯ ಹಾವಳಿ ಸ್ವಲ್ಪವಾದರೂ ಕಡಿಮೆಯಾಗಬಹುದೇನೋ.

ಎಸ್. ಜಿ. ಲಲಿತಾಕ್ಷಿ,
ನೆಮ್ಮಾರ್ ಸಸಿಮನ

ಬೆಳೆಯಲಿ ಸಮತ

ಹುಟ್ಟಿತು ಹುಟ್ಟಿತು ಜಾತಿಯ ಭೂತ
ಸಮಾನ ಸಮಾಧಿಯ ಬರ್ಬರ ನಾತ
ಮನುಜ-ಮನುಜನಲಿ ದ್ವೇಷವ ಕಲಿಸಿ
ಮೌಢ್ಯದ ಕೂಪದಿ ಮುಗ್ಧರ ಸಲಿಸಿ
ಹೆಜ್ಜೆ-ಹೆಜ್ಜೆಗೆ ಶಾಸ್ತ್ರವ ಹುಟ್ಟಿಸಿ
ಜಾತಿಯ ಕೋಟೆಯ ಭದ್ರದಿ ಹುಟ್ಟಿಸಿ
ಪ್ರಕೃತಿ, ಸಮಾನತೆ ಹುಟ್ಟನೆ ಸುಡಿಸಿ
ಅಂಧ ಜನಾಂಗದಿ ಕ್ರೌರ್ಯವ ಬಿತ್ತಿಸಿ
ವೇದ, ಪುರಾಣವ ಗುತ್ತಿಗೆ ಮಾಡುತ
ಮುಗ್ಧರ ಬದುಕಲಿ ಬವಣೆಯ ಕಾಡುತ
ಹುಟ್ಟಿನ ಸತ್ಯವ ಕೊಲ್ಲುತ, ಕೊಬ್ಬುತ
ಮಾನವ ಗುಣಗಳ ಬೇರನೆ ಕೊರೆಯುತ
ಕ್ರೌರ್ಯದಿ ಶೋಷಣೆ ನೆತ್ತರ ಸುರಿಸುತ
ಹೊಲೆಯರ ಹುಟ್ಟಿಸಿ
ಕತ್ತಲೆ ಸೃಷ್ಟಿಸಿ
ಹುಟ್ಟಿತು, ಸುಟ್ಟಿತು, ಜಾತಿಯ ಭೂತ
ಸಮಾನ ಸಮಾಧಿಯ ಬರ್ಬರ ನಾತ
ಸಮಾನ ಬದುಕಿನ ಮೌಲ್ಯವ ಅರಿಯುತ
ಜಾಗೃತ ಜನಾಂಗವು ಹೋರಾಟಕಿಳಿಯುತ
ಬದುಕಿನ ಹಕ್ಕಿನ ವ್ಯಾಪ್ತಿಯ ತಿಳಿದು
ಪ್ರೇಮ- ಸೌಹಾರ್ದದ ಬದುಕನು ಅರಿತು
ರೌದ್ರವ ಮುಗಿಸಲಿ ಜಾತಿಯ ಭೂತ
ಕ್ರೋಧವು ಮುಗಿಯುತ ಬೆಳೆಯಲಿ ಸಮತ

ಕಂ. ಕ. ಕೃಷ್ಣಮೂರ್ತಿ.
(ಎರಡನೇ ಪಿ. ಯು. ಸಿ.)

ಕಡೆಗಣಿಸಲ್ಪಟ್ಟ ಹಳ್ಳಿ

ಕನಿಷ್ಠ ಸೌಲಭ್ಯಗಳೂ ಇಲ್ಲ ಇಲ್ಲಿ

ಮಾನ್ಯರೆ,

ಹರಿಹರಪುರ-ಆಗುಂಬೆ ರಸ್ತೆಯಲ್ಲಿ ಶಾಸ್ತ್ರಿಯಿಂದ ಒಂದು ಮೈಲಿ ಮುಂದೆ ಹೋದರೆ ಎಡಕ್ಕೆ ಹುಲುಗಾರು (ಬಿಳಗದ್ದೆ ಗ್ರಾಮದ ಹುಲುಗಾರು ಅಥವಾ ಚಿಕ್ಕ ಹುಲುಗಾರು) ಸಿಗುತ್ತದೆ. ೬ ಮನೆಗಳಿರುವ ಈ ಊರು ಸಂಪೂರ್ಣ ಕಡೆಗಣಿಸಲ್ಪಟ್ಟು, ಎಲ್ಲ ಸೌಲಭ್ಯಗಳಿಂದ ವಂಚಿತವಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ.

೧) ಮುಖ್ಯ ರಸ್ತೆಯಿಂದ ಈ ಊರಿಗೆ ಗ್ರಾಮಸ್ಥರೇ ಮಾಡಿಕೊಂಡಿದ್ದ ರಸ್ತೆಯನ್ನು ಸುಮಾರು ೧೯೭೪ರಲ್ಲಿ ತಾ. ಅ. ಮಂಡಳಿ ವಹಿಸಿಕೊಂಡಿತು. ಅನಂತರದ ೨-೩ ವರ್ಷ ರಸ್ತೆ ಸ್ವಲ್ಪ ರಿಪೇರಿ ಕಂಡಿತು. ಆ ಮೇಲೆ ರಿಪೇರಿಯೇ ಇಲ್ಲ. ಗ್ರಾಮಸ್ಥರು ಮಂಡಳಿಯ ಕಚೇರಿಗೆ ಹೋಗಿ ವಿಚಾರಿಸಿದರೆ 'ರಿಪೇರಿ ಆಗುತ್ತಿದೆ' ಎಂಬ ಉತ್ತರ ಕೆಲವೊಮ್ಮೆ ಬರುತ್ತದೆ.

ಈ ರಸ್ತೆಗೆ ೨ ಸೇತುವೆ, ೨ ಮೋರಿ ಆಗಬೇಕಾಗಿದೆ. ಗ್ರಾಮಾಭಿವೃದ್ಧಿಗಾಗಿ ಇಷ್ಟೆಲ್ಲ ಯೋಜನೆಗಳು ಬಂದರೂ ಯಾವುದಕ್ಕೂ ಇದು ಒಳಪಟ್ಟಿಲ್ಲದಿರುವುದು ಆಶ್ಚರ್ಯ.

೨) ಈ ಊರಿಗೆ ಕುಡಿಯುವ ನೀರಿನ ಯಾವ ಅನುಕೂಲವೂ ಇಲ್ಲ. ತೋಟದ ಕಪ್ಪನೆ ನೀರು ಕುಡಿಯಬೇಕಾಗಿದೆ. ಬಾವಿ ಇಲ್ಲ.

೩) ವಿದ್ಯುದ್ದೀಪದ ಸೌಲಭ್ಯವಂತೂ ಇಲ್ಲವೇ ಇಲ್ಲ. [ಕಾವಳಿ, ಬಿಳಗದ್ದೆವರೆಗೆ ಶೃಂಗೇರಿ ಕಡೆಯಿಂದ ದೀಪ ಬಂದಿದೆ.]

ಈ ಮೇಲ್ಕಂಡ ರಸ್ತೆಯನ್ನು ಮುಂದುವರಿಸಿ, ಹಿರೇ ಹುಲುಗಾರು, ಸೊಪ್ಪಿನ ಮಕ್ಕಿ, ತಲಗೋಡು ಮೂಲಕ ಕಾವಡಿ-ಕಾಸನೂರು ಲೋಕೋಪಯೋಗಿ ರಸ್ತೆಗೆ ಸೇರಿಸಿದರೆ ಈ ಭಾಗದ ಕಾವಳಿ, ಬಿಳಗದ್ದೆ, ಹಸಿರುಗುಡಿಗೆ, ಮುಂತಾದ ಹತ್ತಾರು ಗ್ರಾಮಗಳಿಗೆ ಅನುಕೂಲವಾಗುತ್ತದೆ. ಈಗಾಗಲೇ ಈ ರೀತಿ ರಸ್ತೆಯನ್ನು ಗ್ರಾಮಸ್ಥರು ತಮ್ಮ ಶಕ್ತಿಗೆ ತಕ್ಕಂತೆ ಮಾಡಿಕೊಂಡಿದ್ದಾರೆ. ಆದರೆ ಯಾವುದೇ ಸೌಲಭ್ಯ ದೊರೆತಿಲ್ಲ.

ನಮ್ಮ ನೆರೆಯ ಗ್ರಾಮದವರೇ ಗ್ರಾಮಾಭಿವೃದ್ಧಿ ಮಂತ್ರಿಗಳಾಗಿದ್ದರೂ ನಮಗೆ ಈ ಕನಿಷ್ಠ ಸೌಲಭ್ಯಗಳೂ ದೊರಕದಿರುವುದಕ್ಕೆ ನಮ್ಮ ಅಶಕ್ತಿ ಅನ್ನಬೇಕೇ ಅಥವಾ ದುರ್ದೈವ ಅನ್ನಬೇಕೆ?

—ಗ್ರಾಮಸ್ಥರು, ಬಿಳಗದ್ದೆ ಹುಲುಗಾರು.

ಗಿಡನೆಡುವವರನ್ನು ಕುರಿತು..

(೧ನೇ ಪುಟದಿಂದ

ಹೀಗೆ ಅಪಾರವಾಗಿ ಕಾಡು ನಾಶವಾಗುತ್ತಿರುವುದನ್ನು ತಡೆಗಟ್ಟಲು ನಿಮ್ಮ ಕೈಯಿಂದ ಸಾಧ್ಯವಿದ್ದೂ ಮಾಡದೆ, ಯಾವುದೋ ಪೇಟೆ ಬೀದಿಯ ಬದಿ ಗಿಡ ನೆಟ್ಟರೆ ಜನ ಅದಕ್ಕೆ ಬೆಲೆ ಕೊಡುತ್ತಾರೆಂದು ಕೊಂಡಿದ್ದೀರಾ? ಸಂಜಯರ ಕಾರ್ಯಕ್ರಮವಂತೂ ಇದಲ್ಲವೆಂದು ನನ್ನ ನಂಬಿಕೆ. ನಿಮ್ಮದೂ ಅಲ್ಲವೆನ್ನುತ್ತೀರಾ? ಇದು ಕೇವಲ ಜನರ ಮುಂದೆ ಒಂದು ಕಣ್ಣು ಕಟ್ಟುವ ನಾಟಕ ಎನ್ನುತ್ತೀರಾ?

ಇನ್ನು ವರದಕ್ಷಿಣೆ ನಿಷೇಧ, ಮದುವೆಯಲ್ಲಿ ದುಂದು ವೆಚ್ಚ ಮಾಡದಿರುವುದು-ಇಂತದನ್ನೆಲ್ಲ ನಿಮ್ಮ ಒಬ್ಬರಾದರೂ ಅನುಸರಿಸುತ್ತೀರಾ? ನಿಮ್ಮದೇ ಎಂ ಎಲ್ ಎ ಮನೆಯ ಮದುವೆಗೆ ಮುಖ್ಯಮಂತ್ರಿಗಳು ಹೆಲಿಕಾಪ್ಟರಿನಲ್ಲಿ ಬಂದು ಹೋಗುತ್ತಾರೆ, ಮಂತ್ರಿಗಳ ಹಿಂಡು ಬರುತ್ತದೆ. ನಿಮಗೆ ನಿಜವಾಗಿಯೂ ಸಂಜಯರ ಕಾರ್ಯಕ್ರಮದಲ್ಲಿ ನಂಬಿಕೆಯಿದ್ದರೆ, ಅವರ ಬಗ್ಗೆ ಗೌರವವಿದ್ದರೆ ಇಂಥ ದುಂದನ್ನು ತಡೆಯಲು ಮುಂದಾಗುತ್ತಿದ್ದಿರಿ. ಅದು ಸಾಧ್ಯವಿಲ್ಲವೆಂದ ಮೇಲೆ ಸುಮ್ಮನೆ ವರ್ಷಕ್ಕೊಮ್ಮೆ ಸಂಜಯರ ಹೆಸರಿನಲ್ಲಿ ಯಾಕೆ ಬೂಟಾಟಿಕೆ ಮಾಡುತ್ತೀರಿ? ಅವರನ್ನು ತಣ್ಣಗೆ 'ಶಾಂತಿವನ'ದಲ್ಲಿ ಮಲಗಿರಲು ಬಿಡಿ.

—'ಸೀಮಾ', ಕೊಪ್ಪ.

ಹೋಟೆಲುಗಳಿಗೆ ಕಾನೂನು ಅನ್ವಯಿಸವೆ ?

ಮಾನ್ಯ ಸಂಪಾದಕರೆ,

ನಮ್ಮ ದೇಶದಲ್ಲಿ ಕಾನೂನಿನ ಉಲ್ಲಂಘನೆಯಾಗುವುದು ಸರ್ವೇಸಾಮಾನ್ಯ. ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳುವುದು ಹೋಟೆಲ್, ಅಂಗಡಿಯವರಿಗಂತೂ ಸುಲಭ.

ಕೊಪ್ಪದಲ್ಲಿ ಇಂತಹ ಕಾನೂನಿನ ಉಲ್ಲಂಘನೆಯಾಗಿದೆಯೇ? ಅಥವಾ ಇವರಿಗೆ ಯಾವ ಕಾನೂನೂ ಅನ್ವಯಿಸುವುದಿಲ್ಲವೇ? ಎನ್ನುವ ಸಂಶಯ ಬರುವುದು ಹೋಟೆಲ್‌ನ ಕಾರ್ಯವೈಖರಿ, ಕಾರ್ಮಿಕರನ್ನು ನಡೆಸಿಕೊಳ್ಳುವ ರೀತಿ ನೋಡಿದಾಗ.

ಇಲ್ಲಿಯ ಕೆಲವು ಹೋಟೆಲ್‌ಗಳಲ್ಲಿ ಕಾರ್ಮಿಕರ ಶೋಷಣೆಯಿಂದ ಗಿರಾಕಿಗಳ ಶೋಷಣೆಯವರೆಗೂ ಕಪ್ಪು ಛಾಯೆ ಹರಡಿಕೊಂಡಿದೆ. ಈ ಹೋಟೆಲ್‌ಗಳಲ್ಲಿ ಯಾವ ಆಧುನಿಕ ಸೋಂಕೂ ಇರುವುದಿಲ್ಲ. ಆರೋಗ್ಯ-ನೈರ್ಮಲ್ಯದ ದೃಷ್ಟಿಯಿಂತೂ ಕೇಳುವುದು. ಕೆಲವು ಹೋಟೆಲ್‌ಗಳಲ್ಲಂತೂ ಗೋಡೆಗೆ ಸುಣ್ಣ ಬಳಿದು ಓಬೀರಾಯನ ಕಾಲವೇ ಆಗಿದೆ. ಸ್ಟೀಲ್ ಉಪಕರಣಗಳ ಉಪಯೋಗವಂತೂ ಇಲ್ಲ. ಬಳಸುವ ಪಾತ್ರೆಯು ಶುಚಿಯಾಗಿರುವುದಿಲ್ಲ. ಕಾಫಿ ಹೀರುತ್ತಿದ್ದಂತೆಯೇ ಲೋಟದ ಒಳ ಮೈನಲ್ಲಿ ಹಾಸಂಬುಗಟ್ಟಿದ ಕಸ ಕಂಡು ಬಂದರೆ ಆಶ್ಚರ್ಯವೇನಲ್ಲ. ಇನ್ನು ತಿಂಡಿ-ತಿನಿಸು, ಊಟದ ಪ್ರಶ್ನೆಯೇ ಬೇರೆ. ದನ ತಿನ್ನುವುದನ್ನು ಜನ ತಿನ್ನಲಿ ಎನ್ನುವ ನೀತಿಯನ್ನು ಪ್ರಕಟಿಸುತ್ತಾರೆ. ಗಿರಾಕಿಗಳ ಮೇಲೇ ಇಷ್ಟೊಂದು ಶೋಷಣೆಯಾಗುತ್ತಿದ್ದರೆ ಇನ್ನು, ಬದುಕಿನ ಅನಿವಾರ್ಯತೆಯಿಂದ ಬಚ್ಚಲು ಮನೆಯಲ್ಲಿ ತಮ್ಮ ಕನಸು ನುಚ್ಚುನೂರಾಗುವುದನ್ನು ನೋಡುತ್ತಾ ಕಷ್ಟಕ್ಕೆ ಹೊಂದಿಕೊಳ್ಳುವ ಕಾರ್ಮಿಕರ ಮೇಲೆ ಇನ್ನೆಷ್ಟು ಶೋಷಣೆಯಾಗುತ್ತಿರಬಹುದು? ಅವರಿಗೆ ಸಮ ವಸ್ತ್ರವಂತೂ ಇಲ್ಲ. ಅವರು ಧರಿಸುವ ಬಟ್ಟೆಯೇ ಅವರನ್ನು ನಡೆಸಿಕೊಳ್ಳುವ ರೀತಿಯನ್ನು ಬಿಂಬಿಸುತ್ತದೆ. ಅನಾರೋಗ್ಯವೇ ಮೂರ್ತಿವೆತ್ತಂತಿರುವ ಇಂತಹ ಹೋಟೆಲಿಗೆ ಹೋಗುವುದು ನರಕ ವಿಹಾರವಾಗಿ ತೋರಿಬಂದರೆ ಆಶ್ಚರ್ಯವೇನಲ್ಲ. ಕಾರ್ಮಿಕರನ್ನು ಸಮಂಜಸವಾಗಿ ನಡೆಸಿಕೊಳ್ಳದಿರುವುದು, ಶುಚಿ ರುಚಿಯ ಬಗ್ಗೆ ಧೋರಣೆ ತೀವ್ರ ಖಂಡನಾರ್ಹ. ಗಿರಾಕಿಗಳು ಸಂಘಟಿತರಾಗಿ ಹೋರಾಡುವುದೇ ಇದಕ್ಕೆ ಪರಿಹಾರ. ಆ ಕಾಲ ಬಂದೀತೆ?

—ಕಂ. ಕ. ಕೃಷ್ಣಮೂರ್ತಿ, ಕೊಪ್ಪ.

ಚಿಕ್ಕಮಗಳೂರು ಹಾಸ್ಟೆಲ್ ದುರಂತ

ತೀವ್ರ ಕ್ರಮಕ್ಕೆ ಎಐಎಸ್‌ಎಫ್ ಒತ್ತಾಯ

ಚಿಕ್ಕಮಗಳೂರು: ಇಲ್ಲಿನ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯದಲ್ಲಿ ಹುಳುಹಿಡಿದ ಅಕ್ಕಿಯ ಅನ್ನ ಉಂಡು ಒಬ್ಬ ಬಾಲಕಿ ಅಸುನೀಗಿ, ನೂರಾರು ಮಕ್ಕಳು ಅಸ್ವಸ್ಥರಾದ ಹಿನ್ನೆಲೆಯಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಶನ್ನಿನ ಜಿಲ್ಲಾ ಮಂಡಳಿಯು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು, ನಿಜವಾದ ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷಿಸುವಂತೆ ಒತ್ತಾಯಿಸಿದೆ.

ಹಾಸ್ಟೆಲಿನ ಐದು ಜನ ನೌಕರರನ್ನು ತಪ್ಪಿತಸ್ಥರೆಂದು ವಜಾ ಮಾಡಿರುವುದು ಸ್ವಾಗತಾರ್ಹವಾದರೂ, ದೋಷಯುಕ್ತ ಆಹಾರ ಪದಾರ್ಥಗಳ ಸರಬರಾಜು ಹಾಗೂ ಬಳಕೆಗೆ ಮೂಲಕಾರಣರು ಯಾರೆಂಬುದನ್ನು ಪತ್ತೆ ಹಚ್ಚಬೇಕೆಂದಿರುವ ಫೆಡರೇಶನ್, ಊರಿನ ಗಣ್ಯರಿರುವ ಹಾಸ್ಟೆಲ್ ಉಸ್ತುವಾರಿ ಸಮಿತಿಯ ಸದಸ್ಯರ ಹಾಗೂ ಹಿರಿಯ ಅಧಿಕಾರಿಗಳ ಬಗ್ಗೆ ಏನೂ ಕ್ರಮ ಕೈಗೊಳ್ಳದಿರುವ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದೆ.

ಈ ಘಟನೆ ಕೇವಲ ಆಕಸ್ಮಿಕ ಎನ್ನುವುದು ಕಾರಣಕರ್ತರನ್ನು ರಕ್ಷಿಸುವ ಪ್ರಯತ್ನವಾಗುತ್ತದೆ ಎಂದಿರುವ ಪತ್ರವು, ಬಹಳ ಕಾಲದಿಂದ ಹಾಸ್ಟೆಲುಗಳಲ್ಲಿ ನಡೆದುಕೊಂಡು ಬಂದ ಅವ್ಯವಹಾರದ ಫಲವೇ ಈ ದುರಂತ ಎಂದಿದೆ.

ವಿದ್ಯಾರ್ಥಿ ಫೆಡರೇಶನ್ ೧೯೮೧ ರಿಂದಲೂ ಜಿಲ್ಲಾಧಿಕಾರಿಗಳು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಹಲವಾರು ಬಾರಿ ಪತ್ರ ಮೂಲಕ, ನಿಯೋಗದ ಮೂಲಕ ಮತ್ತು ವಿದ್ಯಾರ್ಥಿಗಳ ನೇರ ಸಾಕ್ಷ್ಯದ ಮೂಲಕ ಈ ಅವ್ಯವಹಾರಗಳ ಬಗ್ಗೆ ಪದೇ ಪದೇ ತಿಳಿಸುವಿಕೆ ನೀಡಿದ್ದರೂ ಏನೂ ಕ್ರಮ ಕೈಗೊಳ್ಳದೇ ಈ ದುರಂತ ಸಂಭವಿಸಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಜಿಲ್ಲಾಧಿಕಾರಿಗಳ ಮತ್ತಿತರ ವರಿಷ್ಠರ ಅಸಡ್ಡೆಯೇ ಕಾರಣ ಎಂದಿದೆ.


ಈ ದುರಂತಕ್ಕೆ ಪೂರ್ಣ ಜವಾಬ್ದಾರರನ್ನು ಉಗ್ರವಾಗಿ ಶಿಕ್ಷಿಸಬೇಕೆಂದಿರುವ ಎ.ಐ. ಎಸ್.ಎಫ್., ದುರಂತದಲ್ಲಿ ಮಡಿದ ರುಕ್ಮಿಣಿಯ ಕುಟುಂಬಕ್ಕೆ ನೀಡಿರುವ ಪರಿಹಾರವನ್ನು ಹೆಚ್ಚಿಸಬೇಕೆಂದೂ ಒತ್ತಾಯಿಸಿ, ಮುಂದೆ ಹಾಸ್ಟೆಲುಗಳಲ್ಲಿ ಮಾಡಬೇಕಾದ ಬಗೆಗೆ ಹಲವು ಸಲಹೆಗಳನ್ನು ಮುಂದಿಟ್ಟಿದೆ.

ಅಡಿಕೆ ಮತ್ತು ಕಾಫಿ ಬೆಳೆಗಾರರಿಗೆ ಶುಭ ವಾರ್ತೆ

★

ಬೆಳೆಗಾರರ ಮೆಚ್ಚಿಗೆಗೆ ಪಾತ್ರವಾದ

ಚಿಕ್ಕಮಗಳೂರು ಕೆಮಿಕಲ್ ವರ್ಕ್ಸ್ ಅವರ



ISI

ಸೂರ್ಯ ಗುರುತಿನ ಮೈಲುತುತ್ತ

ಉಪಯೋಗಿಸಿ, ಅಧಿಕ ಇಳುವರಿ ಪಡೆಯಿರಿ

★

ಮಾರಾಟಗಾರರು:

ಮ್ಯಾಕ್ಸೋಸ್ ಶಿವಮೊಗ್ಗ; ಟಿ. ಎ. ಪಿ. ಸಿ. ಎಂ. ಎಸ್. ಕೊಪ್ಪ ಮತ್ತು ಶೃಂಗೇರಿ; ರಾಘವೇಂದ್ರ ಏಜನ್ಸೀಸ್, ಶೃಂಗೇರಿ; ವಿಠೋಬರಾವ್, ತೀರ್ಥಹಳ್ಳಿ

ಜಪಾನ್, ಶ್ರೀಲಂಕಾ ದೇಶಗಳಿಗೆ ರಫ್ತಾಗುತ್ತಿದೆ.

ಹರಿಹರಪುರ ಕಿರಿಯ ಕಾಲೇಜಿನ ಮಾನವಿಕ ಸಂಘ

ಹರಿಹರಪುರ: ಇಲ್ಲಿಯ ಕಿರಿಯ ಕಾಲೇಜಿನಲ್ಲಿ ೧೯೮೦ ರಲ್ಲಿ ಪ್ರಾರಂಭವಾದ ಮಾನವಿಕ ಸಂಘ ಈ ವರ್ಷ ತನ್ನ ಚಟುವಟಿಕೆಗಳನ್ನು ವಿಸ್ತರಿಸಲು ಉದ್ದೇಶಿಸಿದೆ.

ಈ ವರ್ಷ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯನ್ನು ಹರಿಹರಪುರದಲ್ಲಿ ನಡಸಲು ಸಂಘ ಆಲೋಚಿಸಿದೆ. ಇದಕ್ಕಾಗಿ ಸಾರ್ವಜನಿಕರಿಂದ ಸಲಹೆಗಳನ್ನೂ ಉದಾರ ಸಹಾಯವನ್ನೂ ಅದು ಅಪೇಕ್ಷಿಸಿದೆ.

ಪ್ರಾರಂಭವಾದ ವರ್ಷವೇ ಸಂಘ ಸಹಾಯಾರ್ಥ ಪ್ರದರ್ಶನ ಮತ್ತಿತರ ಮೂಲಗಳಿಂದ ಹಣ ಸಂಗ್ರಹಿಸಿ, ಕಾಲೇಜಿಗೆ ಸುಮಾರು ಒಂದು ಸಾವಿರ ಪುಸ್ತಕಗಳ ಗ್ರಂಥಾಲಯವನ್ನು ಪಡೆದುಕೊಂಡಿತ್ತು.

ತಲಮಕ್ಕಿ ಪಂಚಾಯ್ತಿಗೆ ವಿಭಾಗಮಟ್ಟದಲ್ಲಿ ಪ್ರಶಸ್ತಿ

ಕುವೆಂಪುಗುಂಡಿ: ಮೈಸೂರು ವಿಭಾಗ ಮಟ್ಟದಲ್ಲಿ ತಲಮಕ್ಕಿ ಗ್ರಾಮ ಪಂಚಾಯ್ತಿ ೩ ನೇ ಸ್ಥಾನ ಪಡೆದು ೨೫೦ ರೂ. ಗಳ ಬಹುಮಾನ ಪಡೆದಿದೆ.

ಜಿಲ್ಲಾ ಮಟ್ಟದಲ್ಲಿ ಈ ಪಂಚಾಯ್ತಿ ಮೊದಲ ಸ್ಥಾನ ಪಡೆದು ೩೦೦ ರೂ. ಬಹುಮಾನ ಪಡೆದಿತ್ತು. ಶೃಂಗೇರಿ ತಾ॥ ನ ಮರ್ಕಲ್ ಗ್ರಾಮ ಪಂಚಾಯ್ತಿ ೨ ನೇ ಸ್ಥಾನವನ್ನೂ ಮೂಡಿಗೆರೆ ತಾ॥ನ ಮಾಕೋನಹಳ್ಳಿ ಪಂಚಾಯ್ತಿ ೩ ನೇ ಸ್ಥಾನವನ್ನೂ ಪಡೆದಿದ್ದವು.

ಸರ್ಕಾರದ ಅಭಿವೃದ್ಧಿ ಯೋಜನೆ ಬಗ್ಗೆ ತರಬೇತಿ ಶಿಬಿರ

ಕೊಪ್ಪ: ರಾಜ್ಯ ಸರ್ಕಾರದ ವಿಶೇಷ ಅಭಿವೃದ್ಧಿ ಯೋಜನೆಗಳು ಹಾಗೂ ಆರ್ಥಿಕ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುವ ಕಾರ್ಯಾಗಾರಗಳು ಶೃಂಗೇರಿ, ನ. ರಾ. ಪುರ ಮತ್ತು ಕೊಪ್ಪದಲ್ಲಿ ಜೂನ್ ೨೯, ಜುಲೈ ೧ ಹಾಗೂ ೨ ರಂದು ನಡೆದವು.

ಶೃಂಗೇರಿಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನ ಡಿ. ಕಳಸಪ್ಪ ಹೆಗ್ಡೆ ವಹಿಸಿದ್ದರು. ಉಪ ವಿಭಾಗಾಧಿಕಾರಿ ಕೆ. ನರಸಿಂಹಯ್ಯ ಹಾಗೂ ತಾಲೂಕಿನ ಲೀಡ್ ಬ್ಯಾಂಕ್ ಆದ ಕೆನರಾಬ್ಯಾಂಕ್ ಮ್ಯಾನೇಜರ್ ರಘುವೀರ್ ಮುಖ್ಯ ಅತಿಥಿಗಳಾಗಿದ್ದರು. ತಹಸೀಲ್ದಾರ್ ಜಿ. ಅನಂತರಾವ್ ಸ್ವಾಗತಿಸಿ, ಬಿ. ಡಿ. ಓ ಅನಂತಮೂರ್ತಿ ವಂದಿಸಿದರು.

ಕೊಪ್ಪದಲ್ಲಿ ನಡೆದ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಎಸ್. ಎಲ್. ಗಂಗಾಧರಪ್ಪ ಉದ್ಘಾಟಿಸಿದರು. ಬಿ. ಜಿ. ಚಿದಂಬರ್ ಅಧ್ಯಕ್ಷತೆ ವಹಿಸಿದ್ದರು. ಕೆ. ಬಾಲಣ್ಣಗೌಡ ಸ್ವಾಗತಿಸಿ, ಜೆ. ಸಿ. ಸುಬ್ರಾವ್ ವಂದಿಸಿದರು.

ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಯೋಜನಾ ನಿರ್ದೇಶಕ ಟಿ. ವೈ. ನಯಾಜ್ ಅಹಮದ್ ಕಾರ್ಯಾಗಾರಗಳನ್ನು ನಡೆಸಿಕೊಟ್ಟರು.

ಅಡ್ಡಗದ್ದೆ ಪ್ರೌಢಶಾಲೆ: ಬಹುವರ್ಷಗಳ ನಂತರ ಈಡೇರಿದ ಬೇಡಿಕೆ

ಅಡ್ಡಗದ್ದೆ: ಜೂನ್ ೧೩ ರಂದು ಇಲ್ಲಿನ ಪ್ರೌಢಶಾಲೆಯ (ತೊರೆಹಡ್ಲು) ಉದ್ಘಾಟನೆಯೊಂದಿಗೆ ಸುತ್ತಮುತ್ತಲ ಹತ್ತಾರು ಹಳ್ಳಿಗಳ ಜನರ ಹಲವು ವರ್ಷಗಳ ಬೇಡಿಕೆಯೊಂದು ಈಡೇರಿದಂತಾಗಿದೆ.

ಸದ್ಯಕ್ಕೆ ಶಾಲೆ ಇಲ್ಲಿನ ಗ್ರಾಮ ಪಂಚಾಯ್ತಿ ಕಟ್ಟಡದಲ್ಲಿ ನಡೆಯುತ್ತಿದ್ದು ಬರುವ ವರ್ಷ ಸಮೀಪದ ತೊರೆಹಡ್ಲಿನಲ್ಲಿ ಸ್ವಂತ ಕಟ್ಟಡ ಹೊಂದುವ ನಿರೀಕ್ಷೆ ಇದೆ.

ಮುಖ್ಯೋಪಾಧ್ಯಾಯ, ಸಹೋಪಾಧ್ಯಾಯ, ಗುಮಾಸ್ತ ಮತ್ತು ಜವಾನರ ಹುದ್ದೆಗಳು ಮಂಜೂರಾಗಿದ್ದು, ಪೀಠೋಪಕರಣ, ಪ್ರಯೋಗಶಾಲೆಗಳಿಗಾಗಿ ೮,೪೦೦ ರೂ. ಮಂಜೂರಾಗಿದೆ. ಸದ್ಯಕ್ಕೆ ಒಬ್ಬ ಉಪಾಧ್ಯಾಯರು, ಒಬ್ಬ ಜವಾನ ಕೆಲಸ ಮಾಡುತ್ತಿದ್ದಾರೆ.

೧೩ ಹುಡುಗಿಯರು, ೪೪ ಹುಡುಗರು ಶಾಲೆಗೆ ಸೇರಿದ್ದಾರೆ. (೮ ನೇ ತರಗತಿ)

ಕಾಲೇಜು ಉದ್ಘಾಟನೆ

(೧ ನೇ ಪುಟದಿಂದ)

ಜೆ. ಸಿ. ಸುಬ್ರಾವ್‌ರಿಂದ ಪ್ರಾರ್ಥನೆಯ ನಂತರ ಕಾಲೇಜು ಶಿಕ್ಷಣದ ಸಹಾಯಕ ನಿರ್ದೇಶಕ ಡಿ ರಂಗನಾಥ್ ಸ್ವಾಗತಿಸಿದರು. ಬಿ. ಆರ್. ಪರಮೇಶ್ವರ ವಂದಿಸಿದರು.

ಸದ್ಯಕ್ಕೆ ಬಿ. ಎ. ಮತ್ತು ಬಿ. ಕಾಂ ತರಗತಿಗಳು ಪ್ರಾರಂಭವಾಗಲಿದ್ದು, ಕನ್ನಡ ಮತ್ತು ಇಂಗ್ಲೀಷ ಮಾಧ್ಯಮಗಳೆರಡಕ್ಕೂ ಅರ್ಜಿ ಸಲ್ಲಿಸಲು ಅವಕಾಶವಿದೆಯೆಂದೂ, ಕನಿಷ್ಟ ಪಕ್ಷ ೧೫ ವಿದ್ಯಾರ್ಥಿಗಳು ಒಂದು ಮಾಧ್ಯಮಕ್ಕೆ ಸಿಕ್ಕರೆ ಅದನ್ನು ಪ್ರಾರಂಭಿಸಲಾಗುವುದೆಂದೂ ರಂಗನಾಥ್ 'ದೀವಟಿಗೆ'ಗೆ ತಿಳಿಸಿದ್ದಾರೆ. ಕಾಲೇಜು ಆಗಸ್ಟ್ ನೊರಲಿಗೆ ಪ್ರಾರಂಭವಾಗುವ ನಿರೀಕ್ಷೆಯಿದೆ.

ಮುಖ್ಯಮಂತ್ರಿ, ವಿದ್ಯಾಮಂತ್ರಿ, ಕ್ಷೇತ್ರದ ಮಂತ್ರಿಗಳು ಹಾಗೂ ಕಾಲೇಜು ಶಿಕ್ಷಣದ ನಿರ್ದೇಶಕ ಶ್ರೀಮತಿ ಸೆಲ್ವಿದಾಸ್ ಅವರುಗಳಿಗೂ, ಉದಾರ ಸಹಾಯ ನೀಡಿರುವ, ನೀಡುತ್ತಿರುವ ಸಾರ್ವಜನಿಕರಿಗೂ ಸಮಿತಿ ಕೃತಜ್ಞತೆ ಸಲ್ಲಿಸಿದೆ.

ಜಯಪುರ ಪ್ರೌಢಶಾಲೆ ವಿವಿಧ ಸಂಘಗಳಿಗೆ ಆಯ್ಕೆ

ಜಯಪುರ: ಇಲ್ಲಿನ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳ ವಿವಿಧ ಸಂಘಗಳಿಗೆ ಆಯ್ಕೆಯಾದ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಹೆಸರುಗಳು ಹೀಗಿವೆ:

ವಿದ್ಯಾರ್ಥಿ ಮುಖಂಡ–ಎನ್. ವಿ. ವಿಜಯೇಂದ್ರ; ಉಪಮುಖಂಡ–ಎನ್. ಜಿ. ಫಣಿರಾಜ; ವಿಜ್ಞಾನ ಸಂಘದ ಕಾರ್ಯದರ್ಶಿ–ಜಯ; ಉಪಕಾರ್ಯದರ್ಶಿ–ಸವಿತಾ ಎನ್. ಎಸ್; ಸಾಂಸ್ಕೃತಿಕ ಸಂಘದ ಕಾರ್ಯದರ್ಶಿ–ಕೆ. ಎಸ್. ಕೃಷ್ಣಮೂರ್ತಿ; ಉಪಕಾರ್ಯದರ್ಶಿ–ಕೆ. ವಿದ್ಯಾ; ಸಮಾಜ ಸಂಘದ ಕಾರ್ಯದರ್ಶಿ–ಜಯಕೃಷ್ಣ; ಉಪ ಕಾರ್ಯದರ್ಶಿಗಳು– ಶ್ಯಾರೀನಾ, ಲತಾ.

ಅಮ್ಮಡಿ ಎಸ್ಟೇಟ್

(೧ ನೇ ಪುಟದಿಂದ)

ಕೊಟ್ಟಿದ್ದಕ್ಕಿಂತ ಹೆಚ್ಚು ಮರಗಳನ್ನು ಕಡಿದಿದ್ದರೆಂಬ ಆರೋಪವನ್ನು ಪರೀಕ್ಷಿಸಲು ಅರಣ್ಯಾಧಿಕಾರಿಗಳು ವ್ಯಾಪಕ ಸಿಬ್ಬಂದಿಯೊಂದಿಗೆ, ಕಡಿದ ಎಲ್ಲಾ ಮರಗಳ ಬಡ್ಡೆಗಳನ್ನು ಎಣಿಸಿದ್ದು, ಅದರಲ್ಲೂ ಹೆಚ್ಚುವರಿ ಕಂಡುಬಂದ ಪ್ರಯುಕ್ತ ದಂಡ ವಿಧಿಸಿರುವುದಾಗಿ 'ದೀವಟಿಗೆ' ಗೆ ತಿಳಿಸಿದ್ದಾರೆ. ಆದರೆ ಅದರ ಅಂಕೆ–ಸಂಖ್ಯೆಗಳನ್ನು, -"ವಿಷಯ 'ಸಬ್‌ಜುಡಿಸ್' ಆಗುತ್ತದೆ" ಎಂಬ ಕಾರಣ ಕೊಟ್ಟು– ಬಹಿರಂಗಪಡಿಸಲು ನಿರಾಕರಿಸಿದ್ದಾರೆ. ಇದು ಅರಣ್ಯ ಅಧಿಕಾರಿಗಳ ಸ್ವಂತ ನಿರ್ಧಾರದಿಂದ ನಡೆಸಿದ ಕೆಲಸ. ನಿರ್ದಿಷ್ಟವಾಗಿ ಇದೇ ವಿಷಯದ ಮೇಲೆ ಯಾವ ಕೋರ್ಟ್ ಪ್ರಕರಣವೂ ಇಲ್ಲ. ಹಾಗಿರುವಾಗ ಇದರಲ್ಲಿ 'ಸಬ ಜುಡಿಸ್' ಆಗುವಂಥದು ಏನಿದೆಯೆಂಬುದು ಅರ್ಥವಾಗುವುದಿಲ್ಲ.

ವಿಧಾನ ಪರಿಷತ್ ಚರ್ಚೆಗೆ ನಕಾರ

ಈ ನಡುವೆ ರಾಜ್ಯ ವಿಧಾನ ಪರಿಷತ್ತಿನಲ್ಲಿ ಈ ವಿಷಯ ಕುರಿತು ಎ. ಕೆ. ಸುಬ್ಬಯ್ಯ ಕಳಿಸಿದ್ದ ಗಮನ ಸೆಳೆವ ಸೂಚನೆಯು ಚರ್ಚೆಗೆ-ವಿಷಯ ಕೋರ್ಟಿನಲ್ಲಿರುವುದರಿಂದ (ಸಬ್ ಜುಡಿಸ್)–ಅನುಮತಿಯನ್ನು ಸಭಾಧ್ಯಕ್ಷರು ನಿರಾಕರಿಸಿದ್ದಾರೆ.

ಅಮ್ಮತಿಯ ಎ. ಆರ್. ಶ್ರೀನಿವಾಸ್ ಎಂಬವರು ಹೈಕೋರ್ಟಿನಲ್ಲಿ ಸಲ್ಲಿಸಿದ್ದ ರಿಟ್ ಅಂಗೀಕಾರವಾಗಿದ್ದು, ಮರ ಕಡಿಯುವುದಕ್ಕೆ ತಡೆಯಾಜ್ಞೆ ಜಾರಿಯಾಗಿರುವುದನ್ನು ಇಲ್ಲಿ ಸ್ಮರಿಸಬಹುದು. (ರಿಟ್ ವಿವರಕ್ಕೆ ೨-೫-೮೨ ರ 'ದೀವಟಿಗೆ' ನೋಡಿ)

ನಿಧನ

ತಲಮಕ್ಕಿ ಗಣೇಶ ಭಟ್ಟರು ೨೬ ರಂದು ಬೆಳಗಿನ ಜಾವ ಮನೆ ಸಮೀಪದ ಸರ್ಕಾರಿ ಬಾವಿಗೆ ಬಿದ್ದು ಮರಣಹೊಂದಿದ್ದಾರೆ. ತಮ್ಮ ಸಾವಿಗೆ ತಾನೇ ಕಾರಣರೆಂದು ಮಕ್ಕಳಿಗೆಲ್ಲ ಪತ್ರಗಳನ್ನು ಬರೆದಿಟ್ಟಿದ್ದಾರೆಂದು ಗೊತ್ತಾಗಿದೆ. ಅವರಿಗೆ ೬೪ ವರ್ಷ ವಯಸ್ಸಾಗಿತ್ತು.

ಅವರು ೪ ಜನ ಹೆಣ್ಣು, ೩ ಗಂಡು ಮಕ್ಕಳನ್ನು ಅಗಲಿದ್ದಾರೆ.

ಜಾಗೃತಿ ದಿನಾಚರಣೆ...

(೧ನೇ ಪುಟದಿಂದ)

ಅಭಿನಂದನೆ

ಇದೇ ಸಂದರ್ಭದಲ್ಲಿ, ಈಚೆಗೆ ಮೈಸೂ[ರು] ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪ[ಡೆದ] ಪ್ರೌಢಶಾಲೆ ಉಪಾಧ್ಯಾಯ ಎಸ್. [...] ಮಲ್ಲಿಕಾರ್ಜುನ ಭಟ್ಟರನ್ನು ಅಭಿನಂದಿಸ[ಲಾ]ಯಿತು.

ಅಭಿನಂದನಾ ಭಾಷಣ ಮಾಡಿದ ಎಸ[...] ಎಸ್. ವಿಶ್ವೇಶ್ವರ್, ಡಾ॥ ಎಸ್ ವಿ [...] ರವರ ನಿರಾಡಂಬರ, ಸೌಜನ್ಯಶೀಲ ವ್ಯ[ಕ್ತಿ]ತ್ವದ ಪರಿಚಯ ಮಾಡಿಕೊಟ್ಟರು. 'ಅಂಕುರ ಬಳಗ' ದ ಪರವಾಗಿ ಹೆಚ್. [...] ವಂತರಾವ್ ಡಾ॥ ಭಟ್ಟರಿಗೆ ಗಂಧದ ಹಾ[ರ] ಹಾಕಿ, ಫಲತಾಂಬೂಲ ಕೊಟ್ಟು ಗೌರವಿ[ಸಿ]ದರು.

ಸನ್ಮಾನಕ್ಕೆ ಉತ್ತರವಿತ್ತ ಡಾ॥ ಎಸ[...] ವಿ.ಎಂ., ಬೇಂದ್ರೆಯವರ ಕವನವೊಂದ[...] ಉದಹರಿಸಿ, ಸರ್ಕಾರ ಭಾಷಾ ನೀತಿ[...] ಬಗ್ಗೆ ನಿರ್ಣಯ ಪ್ರಕಟಿಸಿದ ಮಾತ್ರ[ಕ್ಕೆ] ಕನ್ನಡದ ಸಮಸ್ಯೆ ಬಗೆಹರಿಯಲಿಲ್ಲ. [...] ಕಡೆ ಕನ್ನಡದ ಆರಾಧನೆ ಆಗುವವರೆ[ಗೆ] ಸಾಧನೆ, ಹೋರಾಟ, ಮುಂದುವರಿ[ಯ] ಬೇಕು. ನಾವು ಸದಾ ಜಾಗೃತರಾಗಿರಬೇ[ಕು] ಎಂದರು.

ಬೇರೆ ರಾಜ್ಯಗಳಲ್ಲಿರುವ ಕನ್ನಡಿಗ[...] ತೊಂದರೆಯಾಗುತ್ತೆಂಬ ನೆಪವೊ[...]

ಕನ್ನಡ ನಾಡಲ್ಲಿ ಕನ್ನಡಕ್ಕೆ ಅಗ್ರಸ[ಸ್ಥಾನ]ವನ್ನು ವಿರೋಧಿಸುವುದು ಸರಿಯಲ್ಲ. ಹೊ[ರ] ನಾಡಿನ ಕನ್ನಡಿಗರು ಅಲ್ಲಿಯ ಭಾಷೆ ಕಲಿ[ತು] ಅಲ್ಲಿನವರೊಂದಿಗೆ ಬೆರೆಯಲೇಬೇಕು ಎಂ[ದು] ಅವರು ಹೇಳಿದರು.

ಅಧ್ಯಕ್ಷ ಭಾಷಣ ಮಾಡಿದ ಜಿ. [...] ಸವಿಲೇಕರ್, ಮಲೆನಾಡಿನವರೇ ಆದ ಡಾ[॥] ಎಸ್. ವಿ. ಎಂ. ರವರ ಸಾಧನೆ ನಮ[ಗೆ] ಹೆಮ್ಮೆಯ ಸಂಗತಿ. ಎಲ್ಲಾ ಪ್ರೌಢಶಾ[ಲೆ] ಕಾಲೇಜುಗಳಲ್ಲೂ ಪ್ರೌಢ ಸಂಶೋಧ[ನೆಗೆ] ಅವಕಾಶ ಒದಗಬೇಕು ಎಂದರು.

ಎಸ್. ಹೆಚ್. ನಾಗರಾಜ್, ಅಂಬಿ[...] ವೀಣಾ, ಎಸ್. ಎಸ್. ವಿಶ್ವೇಶ್ವರ್, ಗ[...] ರಾಜ ತಂತ್ರಿ, ಕೃಷ್ಣ ಭಟ್ಟ, ಇವರು[...] ಕನ್ನಡ ಗೀತೆಗಳನ್ನು ಹಾಡಿದರು.

